ಪ್ರಕಟಣೆ

ಅಧ್ಯಕ್ಷರು.—ಮಾನ್ಯ ವಿಧಾನಸಭಾ ಸದಸ್ಯರಾದ ಶ್ರೀ ಅಜ್ಜೀಬಾಳ್ ಜಿ. ಎಸ್. ಹೆಗ್ಡೆಯವರು ೧೯ನೇ ಆಗಸ್ಟ್, ೧೯೮೫ ರಿಂದ ೧೫ ದಿನಗಳ ಕಾಲ ವಿಧಾನ ಸಭೆಯ ಉಪವೇಶನಗಳಿಗೆ ಗೈರು ಹಾಜರಾಗಲು ಅನುಮತಿಯನ್ನು ಕೋರಿ ಪತ್ರ ಬರೆದಿರುತ್ತಾರೆ.

ಶ್ರೀ ಅಜ್ಜೀಬಾಳ ಜಿ. ಎಸ್. ಹೆಗ್ಡೆ ಅವರು ಸದರಿ ಉಪವೇಶನಗಳಿಗೆ ಗೈರು ಹಾಜರಾಗುವುದಕ್ಕೆ ಅನುಮತಿ ಕೊಡಬೇಕೆಂದು ಸದನವು ಅಪೇಕ್ಷಿಸುತ್ತದೆಯೇ ?

ಮಾನ್ಯ ಸದಸ್ಯರುಗಳು.—ಆಗಬಹುದು.

ಅಧ್ಯಕ್ಷರು.—ಗೈರು ಹಾಜರಾಗಲು ಶ್ರೀ ಅಜ್ಜೀಬಾಳ ಜಿ. ಎಸ್. ಹೆಗ್ಡೆ ಅವರಿಗೆ ಅನುಮತಿ ನೀಡಲಾಗಿದೆ.

ಮಂಡನೆಗಳು

ಶ್ರೀ ಪಂಪಾಪತಿ.—ಮಾನ್ಯ ಅಧ್ಯಕ್ಷರೆ, ಬಹಳ ಪ್ರಾಮುಖ್ಯವಾದ ವಿಷಯಗಳನ್ನು ಚರ್ಚೆ ಮಾಡಬೇಕು ಎಂದು ತಮ್ಮ ಗಮನವನ್ನು ಸೆಳೆಯುತ್ತೇನೆ.

ಅಧ್ಯಕ್ಷರು.—ನಿಮಗೆ ಇಂಟಿಮೇಷನ್ ಬಂದಿದೆಯೇ ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅನುಮತಿ ನಿರಾಕರಣೆ ಮಾಡಿದ್ದೇವೆಂದು ತಮಗೆ ತಿಳಿಸಿದ್ದೇವೆ. ಈಗ ನೀವು ಏನೂ ಮಾಡುವುದಕ್ಕಾಗುವುದಿಲ್ಲ. ನಾವು ರಿಜೆಕ್ಟ್ ಮಾಡಿದಮೇಲೆ ಆ ವಿಷಯವೇ ಮುಗಿದು ಹೋಯಿತು. ಈಗ ಸಭೆಯ ಮುಂದೆ ಗಮನ ಸೆಳೆಯುವ ಸೂಚನೆ ಇದೆ.

ಶ್ರೀ ಪಂಪಾಪತಿ.—ಕೇಂದ್ರದವರೇ ಅನೇಕ ಸಮಸ್ಯೆಗಳನ್ನು ಬಗೆಹರಿಸಿದ್ದಾರೆ. ವಿಜಯನಗರ ಉಕ್ಕಿನ ಕಾರ್ಖಾನೆಯ ಸಮಸ್ಯೆ ಇದೆ.

ಅಧ್ಯಕ್ಷರು.—ನಿಮಗೆ ರೂಲ್ಸನ್ನು ಕಳಿಸಿಕೊಡುತ್ತೇನೆ, ಓದಿ.

ಶ್ರೀ ಪಂಪಾಪತಿ.—ಕೇಂದ್ರದವರು ಅನೇಕ ಸಮಸ್ಯೆಗಳನ್ನು ಬಗೆಹರಿಸಿರುತ್ತಾರೆ. ನಮ್ಮ ರಾಜ್ಯದಲ್ಲಿ ವಿಜಯನಗರದ ಉಕ್ಕಿನ ಕಾರ್ಖಾನೆಯ ಪ್ರಶ್ನೆ ೧೫ ವರ್ಷಗಳಿಂದ ಇದೆ. ಇದಕ್ಕೆ ಅವಕಾಶ ಮಾಡಿಕೊಟ್ಟರೆ...

ಅಧ್ಯಕ್ಷರು.—ಅಡ್ಜರ್ನ್‌ಮೆಂಟ್ ಮೋಷನ್‌ಗೆ ಅವಕಾಶ ಕೊಡುವುದಿಲ್ಲ. I have withheld my consent.

ಶ್ರೀ ಪಂಪಾಪತಿ.—ಮಾನ್ಯ ಮುಖ್ಯಮಂತ್ರಿಗಳು ೧೯೮೪ ರಲ್ಲಿ ಒಂದು ಕಮಿಟಿಯನ್ನು ರಚಿಸಿ ಕೇಂದ್ರ ಸರ್ಕಾರಕ್ಕೆ ನಿಯೋಗ ಹೋಗೋಣ ಎಂದು ಹೇಳಿದ್ದರು. ಒಂದು ವರ್ಷವಾದರೂ ನಿಯೋಗ ಹೋಗಲಿಲ್ಲ. ಈ ಸಮಸ್ಯೆಯ ಬಗ್ಗೆ ಕೇಂದ್ರ ಸರ್ಕಾರದ ಮೇಲೆ ಒತ್ತಾಯ ತರುವುದು ಬಹಳ ಅಗತ್ಯವಿದೆ.

ಅಧ್ಯಕ್ಷರು.—ನಿಮಗೆ ಎಷ್ಟು ಸಲ ಹೇಳಬೇಕು.

ಶ್ರೀ ಪಂಪಾಪತಿ.—ಎಷ್ಟು ಸಲ ಹೇಳಿದ್ದೀರಿ.

ಅಧ್ಯಕ್ಷರು.—ರೂಲ್ಸ್, ರೆಗ್ಯುಲೇಷನ್‌ನನ್ನು ತಾವು ಓದುತ್ತಾ ಇರಬೇಕು.

ಶ್ರೀ ಪಂಪಾಪತಿ.—ಇದು ಬಹಳ ಪ್ರಾಮುಖ್ಯವಾದಂಥ ಪ್ರಶ್ನೆ.

ಅಧ್ಯಕ್ಷರು.—ಪಂಪಾಪತಿಯವರೆ ನೀವು ಏನು ಮಾತನಾಡಿದರೂ ಅದು ರಿಕಾರ್ಡ್‌ಗೆ ಹೋಗುವುದಿಲ್ಲ.